ತಗ್ಗಿತ್ತು. 'ಏನು ಅಂತ ಹೇಳಲಿ... ಯಾರಿಗೆ ಹೇಳಲಿ?' ಬಿಕ್ಕಿದಳು.' ನನ್ನ ಪ್ರಶೂ, ಪುಟ್ಟಿ... ಅವರು ಸುಖವಾಗಿರಬೇಕು ಅಷ್ಟೆ... ಅವರು ಹಾಗೇ ಇದ್ದಾರೆ ಈಗ... ಮುಂದೆ!...' ಮಾತು ನಿಲ್ಲಿಸಿ ಬಿಕ್ಕತೊಡಗಿದಳು. ಅಳು ಹರಿಯಲಿ ಎಂದು ನಾನು ಸುಮ್ಮನಾದೆ. ಸ್ವಲ್ಪ ಅತ್ತು ಹಗುರಾದ ನಂತರ ಹೇಳಿದಳು 'ಏನು ಹೇಳಲಿ ನಿನಗೆ? ಯಾಕೋ... ಎಲ್ಲವೂ ನನ್ನ ಮದುವೆಯಲ್ಲಿ ಮುಗಿದೇ ಹೋಯಿತು ಅನ್ನಿಸಿದೆ...' ಸ್ವಲ್ಪ ತಡೆದು ಹೇಳಿದಳು...' ತಪ್ಪು ತಿಳಿಯಬೇಡ.. ಅನೇಕ ಸಲ ಅನ್ನಿಸಿದೆ... ಅನ್ನಿಸುತ್ತಲೇ ಇರುತ್ತದೆ... ಬಹುಶಃ ನಾನು ನಿನ್ನನ್ನ ಮದುವೆ ಆಗಿದ್ದರೆ ಹೆಚ್ಚು ಚೆನ್ನಾಗಿರುತ್ತಿದ್ದೆ ಅಂತ...' ನನ್ನ ಮುಖ ನೋಡಿದಳು. ನನ್ನೊಳಗೆ ಇದ್ದ ಬೆಟ್ಟದ ಭಾಗವೊಂದು ಕಳಚಿ ಬಿದ್ದ ಹಾಗೆ ಅನ್ನಿಸಿತು. ಅವಳನ್ನೇ ಸುಮ್ಮನೆ ದಿಟ್ಟಿಸಿದೆ.

'ತಪ್ಪು ಸರಿಗಳು ನನಗೆ ಗೊತ್ತಿಲ್ಲ. ಆದರೆ ಈಗ ಏನು ಮಾಡಲು ಸಾಧ್ಯ?' ನಿಡುಸುಯ್ದಳು.

'ಯಾಕೆ ಹಾಗನ್ನಿಸುತ್ತೇ?' ಗಂಭೀರವಾಗಿ ಪ್ರಶ್ನಿಸಿದೆ.

'ಯಾಕೆಂದರೆ... ಯಾಕೆಂದ್ರೆ...' ಉತ್ತರಿಸಲಾಗದೇ ತೊಳಲಿದಳು. ಮತ್ತೆ ಕೇಳಿದಳು, 'ನಿನಗೆ ಹಾಗನ್ನಿಸುತ್ತಿಲ್ವಾ ?'

'ಇಲ್ಲ...' ದಿಟ್ಟವಾಗಿ ಹೇಳಿದೆ. 'ನಾನು ಶ್ರದ್ಧಾಳ ಜೊತೆಯಲ್ಲಿ ಬಹಳ ಸಂತೋಷವಾಗಿದ್ದೇನೆ... ಹಾಗೇ ನೀನೂ ಕೂಡ ಅವನೊಂದಿಗೆ ಸಂತೋಷವಾಗಿಯೇ ಇರಬೇಕು' ಒತ್ತಿ ಹೇಳಿದೆ.

'ನನಗೆ ಹಾಗನ್ನಿಸುತ್ತಿಲ್ಲ...' ಆಳವಾಗಿ ನೋಡುತ್ತಾ ಹೇಳಿದಳು. 'ಯಾಕೋ... ನನ್ನದಲ್ಲದ ಬದುಕನ್ನು ಬಾಳುತ್ತಿದ್ದೇನೆ ಅನ್ನಿಸುತ್ತಿದೆ... ಕಳೆದು ಹೋಗುತ್ತಿದ್ದೇನೆ ನಿಶಾಂತ್... ಎಷ್ಟು ಬೇಗ ಕಳೆಯುತ್ತೋ ಇದೆಲ್ಲವೂ ಅಂತ ಕಾಯುತ್ತಾ ಇದ್ದೇನೆ... ಯಾವುದೂ ನನ್ನದಲ್ಲ ಆದರೂ ನನ್ನದು ಅಂತಲೇ ಬಾಳಬೇಕು... ಯಾಕೆ ಈ ಬಾಳು ಅಂತ ಅನ್ನಿಸುತ್ತೆ...' ಭಾರವಾದಳು. 'ಪ್ರಶಾಂತ್ ಒಳ್ಳೆಯವನು... ತುಂಬಾ ಒಳ್ಳೆಯವನು. ಆದರೂ ನನ್ನವನಲ್ಲ ಅನ್ನಿಸುತ್ತೆ... ಏನನ್ನೂ ಅವನೊಂದಿಗೆ ಹಂಚಿಕೊಳ್ಳಲು ಒದ್ದಾಡುತ್ತೇನೆ. ಅತ್ತೆ ಮಾವ ನನ್ನವರು, ಪ್ರೀತಿಸುತ್ತಾರೆ... ಆದರೆ ಯಾವುದನ್ನೂ ಅರ್ಥ ಮಾಡಿಕೊಳ್ಳಲು ಅವರಿಗೆ ಆಗೋಲ್ಲ ಅನ್ನಿಸುತ್ತೆ... ನಿಶಾಂತ್... ನಾನು ಸೋತು ಹೋದೆ ಅನ್ನಿಸುತ್ತಿದೆ' ಕಣ್ಣಂಚನ್ನು ಒದ್ದೆ ಮಾಡಿಕೊಂಡಳು. 'ನನ್ನೊಳಗಿದ್ದ ಪ್ರಶ್ನಾ ಎಲ್ಲಿ ಕಳೆದಳು, ಹೇಗೆ ಕಳೆದಳು, ಯಾಕೆ ಕಳೆದಳು... ಒಂದೂ ಗೊತ್ತಿಲ್ಲ ನಿಶಾಂತ್... ಈಗ ನೀನು ಕೇಳುತ್ತಿದ್ದೀಯ ನೋಡು... ಹೀಗೆ ಒಂದೇ ಒಂದು ದಿನ ಕೂಡ ನನ್ನನ್ನ ಯಾರೂ ಕೇಳಲಿಲ್ಲ. ನನ್ನ ಮಾತಿಗೂ ಬೆಲೆ ಇಲ್ಲ.. ನನ್ನ ಮೌನಕ್ಕೂ ಬೆಲೆ ಇಲ್ಲ. ಆದರೆ ನಿನ್ನ ಬಳಿ ನನ್ನ ಮಾತು, ಮೌನ ಎರಡಕ್ಕೂ ಒಂದು ಸ್ಥಾನ ಇದೆ... ಬದುಕಿನಲ್ಲಿ ನನ್ನದಾಗಿದ್ದ ಎರಡಕ್ಕೂ ಬೆಲೆಯೇ ಇಲ್ಲದ ಜಾಗದಲ್ಲಿ ಹಣ, ಶ್ರೀಮಂತಿಕೆ ಸುರಿದು ಸೋರಿ ಹೋಗುತ್ತಿದೆ ...ಹೇಗೆ ಮುಂದುವರಿಯಲಿ ನಾನು ?'

ಮೊತ್ತ ಮೊದಲ ಬಾರಿಗೆ ಅವಳು ತನ್ನದೆಲ್ಲವನ್ನೂ ನನ್ನ ಮುಂದೆ ತೋಡಿಕೊಂಡಾಗ ನಾನು ಮೌನವಾಗಿಬಿಟ್ಟೆ. ಅವಳು ಕಳೆದುಕೊಂಡದ್ದನ್ನು ನೀಡು ಎಂದು ಪ್ರಶಾಂತನಿಗಾಗಲಿ, ಅವನ ತಾಯಿ ತಂದೆಯರಿಗಾಗಲಿ ಹೇಳಲು ಸಾಧ್ಯವೇ? ಇಲ್ಲ... ಅವರನ್ನು ಹಾಗೇ ಒಪ್ಪಿಕೊಂಡು ನಿನ್ನ ಬದುಕಿನಲ್ಲಿ ಇರುವ ತನಕವೂ ಸಂತೋಷ ಹುಡುಕುತ್ತಾ ಹೋಗುತ್ತಿರು ಎಂದು ಇವಳಿಗೆ ಹೇಳಲೇ?

ಏನು ಉತ್ತರಿಸಲಿ ಇವಳಿಗೆ? ಮಾತಾಡು, ಮಾತಾಡು ಎಂದು ಹಿಂಸೆ ಮಾಡಿ